ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಾಮರಾಜನಗರ ತಾಲ್ಲೂಕನ್ನು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಡಿಯಲ್ಲಿ ಸೇರಿಸುವುದನ್ನು ಕೈಬಿಡಲಾಗಿರುವುದು ನಿಜವೆ;

ಆ) ಈ ತಾಲ್ಲೂಕನ್ನು ಮೇಲೆ ಹೇಳಿದ ಕಾರ್ಯಕ್ರಮದಡಿಯಲ್ಲಿ ಸೇರಿಸುವುದನ್ನು ಪರಿಶೀಲಿಸಿ, ವರದಿಯನ್ನು ನೀಡಲು ಒಂದು ಸಮಿತಿಯನ್ನು ನೇಮಿಸಿರುವುದು ನಿಜವೆ ?

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು):-

ಅ) ಚಾಮರಾಜನಗರ ತಾಲ್ಲೂಕನ್ನು ಮಲೆನಾಡು ಅಭಿವೃದ್ಧಿ ಮಂಡಳಿಯಡಿಯಲ್ಲಿ ಸೇರಿಸಿಲ್ಲ.

ಆ) ಹೌದು.

ಕೇಂದ್ರ ಸರ್ಕಾರದಿಂದ ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ

1182 (2035): ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ):-

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚೆಗೆ ಕೇಂದ್ರ ಸರ್ಕಾರದಿಂದ ಮಂಜೂರಾದ ರಾಷ್ಟ್ರೀಯ ಹೆದ್ದಾರಿಗಳ ಒಟ್ಟು ಉದ್ದ (ಕಿ.ಮೀ. ಗಳಲ್ಲಿ) ಎಷ್ಟು;

ಆ) ಬೈಪಾಸ್ ರಸ್ತೆಯೂ ಸೇರಿದಂತೆ ಈ ರಾಷ್ಟ್ರೀಯ ಹೆದ್ದಾರಿಗಳ ಅಂದಾಜು ವೆಚ್ಚ ಎಷ್ಟು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ಯಾವುವೂ ಇಲ್ಲ. 1973ರಿಂದೀಚೆಗೆ ಯಾವ ರಾಜ್ಯ ರಸ್ತೆಯನ್ನೂ ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಘೋಷಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸಿಕೊಟ್ಟ ನೀರಾವರಿ ಯೋಜನೆಗಳ ವಿವರ

1184 (2038): ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ):-

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರಕ್ಕೆ ಅದರ ಅನುಮೋದನೆಗಾಗಿ ಕಳುಹಿಸಿಕೊಟ್ಟ ನೀರಾವರಿ ಯೋಜನೆಗಳ ಹೆಸರು ಹಾಗೂ ಅಂದಾಜು ಮೊತ್ತವೇನು; (ವರ್ಷವಾರು ಹಾಗೂ ಯೋಜನೆವಾರು ವಿವರ ನೀಡುವುದು);

ಆ) ಕೇಂದ್ರದಿಂದ ಇದುವರೆಗೂ ಅನುಮೋದಿಸಲ್ಪಟ್ಟ ಯೋಜನೆಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ಅಂದಾಜು ಮೊತ್ತವೇನು ?